# Government of Karnataka

Sub: Administrative approval for work estimates of Rs. 12,340 Crores for Upper Bhadra Project

Ref: (1) Government Order No. WRD 63 VBT 2000, dated 23.08.2003

(2) Government Order No. WRD 152 VBE 2001, Part-1, dated 15.09.2008

(3) The Managing Director, Karnataka Neeravari Nigam Ltd, Letter No: KNNL/UPBs A&B/2013-14/4496 dated 07.02.2014

PROPOSAL:-

Based on the above reference (1), under scheme –A, Upper Bhadra project phase-1 (including Ubrani Lift Irrigation Scheme) is granted administrative approval with Rs. 2813 Crores for utilizing 23 TMC water (10 TMC water from Bhadra River and remaining 13 TMC of water saved due to modernization of Vijayanagara, Tunga and Bhadra canals) and is been handed over to Karnataka Neeravari Nigam Ltd for project implementation.

With respect to above reference (2), Upper Bhadra project phase-1 is given in-principle approval for revised estimate of Rs. 5985 Crores. With the view of immediate implementation of irrigation works of Upper Bhadra project stage–1, Government has accorded revised administrative approval subject to fulfillment of conditions stated by the Board of Directors, Technical Sub Committee and Karnataka Neeravari Nigam Ltd from time to time.

Vide reference (3), above the Managing Director, Karnataka Neeravari Nigam Ltd has prepared a scheme for overall implementation of upper Bhadra project at a cost of Rs.12, 340 crores. The same has been revised during 2 and 3 estimates review committee meeting held on 5/12/13 and 8/1/14. The committee has recommended to the board of directors to submit the same to the government towards obtaining administrative approval, hence the DPR for the Upper Bhadra Project was placed at the board of directors' 62nd meeting held on 24.01.2014. In the said meeting, as per the recommended action of the estimates review committee, the DPR for Rs 12340 Crores for integrated Upper Bhadra Project has been approved by the Nigam and the same has been submitted to the government for the administrative approval.

....2..

In the light of same Managing Director, Karnataka Neeravari Nigam Ltd has proposed to irrigate 2,25,215Ha of land using micro irrigation in Chikamagalur, Chitradurga, Davangere and Chitradurga branch canals, Jagalur branch canal, Tarikere lift as well as gravity canal and Tumkur branch canals. The detailed project report for the Upper Bhadra Project, involving total water utilization of 29.9 TMC at the cost of Rs. 12, 340 Crores (2012-13 estimates). The project proposes micro irrigation scheme for 2,25,215 Ha of land in Chikamagalur, Chitradurga, Davangere and Tumkur, utilizing 19.04 TMC water and construction of Chitradurga branch canals, Jagalur branch canal, Tarikere lift, Gravity canal and Tumkur branch canals. In addition Under this project, along with proposed irrigation facility, filling up of 367 Minor Irrigation tanks using 8.86 TMC water in the above mentioned districts as well as supplying 2 TMC water to Vanivilas Sagar has been proposed. The said DPR has been submitted to the Government by the Managing Director, Karnataka Neeravari Nigam Ltd seeking administrative approval.

Examining the proposal submitted by the Managing Director, Karnataka Neeravari Nigam Ltd, the following order is issued.

**Govt. Order No: WRD 53 VBE 2014, Bangalore Date: 06.03.2015**

The Government hereby accords revised administrative approval to the Upper Bhadra Project, which proposes to irrigate 2,25,215Ha Land using micro irrigation, filling up of 367 MI tanks to 50% of their capacity and supplying 2 TMC of water to Vanivilas Sagar through the Tumkur branch canal.

In continuation, it is also hereby ordered to submit a proposal to have this project declared a 'National Project' to the Central Government as well as take steps to commence any emergency works at the earliest.

This order has been issued with the approval of Finance Department vide circular No. FD 596 FC-1/2014 dated 22.11.2014 and F.D/PS/1974/2015 dated 24.01.2015.

By and order in the name of
Governor of Karnataka
Sd/-
(K. S. Nagaraja)
Under Secretary to the Government (Technical-4)
Water Resource Department

To

1. The Chief Principal Accountant General (G and S.S.A), Karnataka, new building, audit bhavan, Post box No.5398, Bangalore-560001.

...3...

2. The Principal Accountant General, Karnataka, Bangalore.
3. The Personal Secretary to the Chief Secretary ,Vidhana Soudha Bangalore,
4. The Personal Secretary to the Chief Secretary (Cabinet Committee),Vidhana Soudha Bangalore, (Subject no: C.04/2014, dated 08.01.2015 regarding and as approved by the Cabinet Committee meeting dated 21.01.2015).
5. The Personal Secretary to the Additional Chief Secretary ,Vidhana Soudha Bangalore
6. The Personal Secretary to the Additional Chief Secretary and Development Commissioner Vidhana Soudha Bangalore,
7. The Personal Secretary to the Additional Chief Secretary Water Resource Department. Vikasa Soudha Bangalore
8. The Personal Secretary to the Principal Secretary. Environment, Forest and Ecology department. M.S building Bangalore.
9. The Personal Secretary to the Principal Secretary, Finance Department Vidhana Soudha Bangalore
10. The Personal Secretary to the Secretary Water Resource Department. Vikasa Soudha Bangalore
11. The Personal Secretary to the Hon'ble minister for Water Resource Department, Vidhana Soudha Bangalore.
12. The Special Officer and Deputy Secretary to the Government, Finance Department (PWD, Treasury), Vidhana Soudha, Bangalore.
13. All Deputy Secretary / Special Duty Officer/ Under Secretary, Water Resource Department. Vikasa Soudha Bangalore
14. The Chief Engineer, Water Resource Development Board. Anandrao Circle, Bangalore.
15. The Managing Director, Karnataka Neeravari Nigam Ltd, Coffee Board, Bangalore
16. The Chief Engineer, Karnataka Neeravari Nigam Ltd, Upper Bhadra Project, Chitradurga.
17. The Director, State Gazette Department, Bangalore.
18. The Director. Centre for Geometric, Anandrao Circle, Bangalore.
19. Guard file / additional copies.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭದ್ರಾ ಮೇಲ್ದಂಡೆ ಯೋಜನೆಯ ರೂ.12,340.00 ಕೋಟಿಗಳ ಕಾಮಗಾರಿಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

+++++

*ಓದಲಾಗಿದೆ :-*

1. ಸರ್ಕಾರದ ಆದೇಶ ಸಂಖ್ಯೆ :ಜಸಂಇ 63 ವಿಬ್ಯಾತ 2000, ದಿನಾಂಕ:23.08.2003.
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ:152:ವಿಬ್ಯಾಇ:2004 ಭಾ-1, ದಿನಾಂಕ: 15.09.2008.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ:ಕನೀನಿ:ಭ.ಮೇ.ಯೋ:ಸ್ಕೀಂಎ&ಬಿ:2013-14:4994:ದಿನಾಂಕ:07.02.2014.

*ಪ್ರಸ್ತಾವನೆ :-*

ಮೇಲೆ ಓದಲಾದ(1) ಸರ್ಕಾರದ ಆದೇಶದಲ್ಲಿ, ಭದ್ರಾ ಮೇಲ್ದಂಡೆ ಯೋಜನೆ ಹಂತ-1 (ಉಬ್ರಾಣಿ ಏತ ನೀರಾವರಿ ಯೋಜನೆ ಸೇರಿದಂತೆ) ಯೋಜನೆಯನ್ನು ಸ್ಕೀಂ-ಎ ಅಡಿಯಲ್ಲಿ 23 ಟಿ.ಎಂ.ಸಿ ನೀರಿನ ಬಳಕೆಯೊಂದಿಗೆ (ಭದ್ರಾ ನದಿಯಿಂದ 10 ಟಿ.ಎಂ.ಸಿ ನೀರು ಮತ್ತು ತುಂಗಾ ಅಣೆಕಟ್ಟು ನಾಲೆಗಳು, ಭದ್ರಾ ಅಣೆಕಟ್ಟು ನಾಲೆಗಳು ಮತ್ತು ವಿಜಯನಗರ ನಾಲೆಗಳ ಆಧುನೀಕರಣದಿಂದ ಉಳಿತಾಯವಾಗುವ 13.00 ಟಿ.ಎಂ.ಸಿ ನೀರು) ರೂ.2813.00 ಕೋಟಿಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಅನುಷ್ಠಾನಕ್ಕಾಗಿ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿರುತ್ತದೆ.

ಮೇಲೆ ಓದಲಾದ(2) ಸರ್ಕಾರದ ಆದೇಶದಲ್ಲಿ, ಭದ್ರಾ ಮೇಲ್ದಂಡೆ ಯೋಜನೆ ಹಂತ-1ರ ಮಾರ್ಪಾಡಿತ ಅಂದಾಜು ಮೊತ್ತವಾದ ರೂ.5985.00 ಕೋಟಿಗಳಿಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಹಂತ-1ರ ಮೊದಲನೆ ಹಂತದಲ್ಲಿ, ನೀರಾವರಿ ಭಾಗದ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಪೂರ್ಣಗೊಳಿಸುವ ಹಿತದೃಷ್ಟಿಯಿಂದ, ಕರ್ನಾಟಕ ನೀರಾವರಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿ ಮತ್ತು ತಾಂತ್ರಿಕ ಉಪ ಸಮಿತಿಯಿಂದ ವಿಧಿಸಲಾಗಿರುವ ಷರತ್ತುಗಳಿಗೆ ಮತ್ತು ಮುಂದೆಯೂ ಸಹ ವಿಧಿಸಬಹುದಾದ ಷರತ್ತುಗಳಿಗೆ ಮತ್ತು ಕಾಲ ಕಾಲಕ್ಕೆ ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆದು ಅದರಂತೆ ಮುಂದುವರೆಯುವ ಷರತ್ತಿಗೆ ಒಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ (3)ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ರವರು, ಒಂದೇ ಹಂತದಲ್ಲಿ ಅನುಷ್ಠಾನಗೊಳಿಸಲು ರೂ.12340.00 ಕೋಟಿಗಳ ಮೊತ್ತದ ಸಮಗ್ರ ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ತಯಾರಿಸಿದ್ದು, ಇದಕ್ಕೆ ~~ದಿನಾಂಕ 5/12/~~2013 ಮತ್ತು 8/1/2014ರಂದು ಜರುಗಿದ ನಿಗಮದ 2ನೇ ಮತ್ತು 3ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿ ಪಡೆದಿದ್ದು, ಸಮಿತಿಯು ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಶಿಫಾರಸ್ಸು ಕೋರಿ ನಿಗಮದ ನಿರ್ದೇಶಕರ ಮಂಡಳಿಯ ಮುಂದೆ ಮಂಡಿಸಲು ಸೂಚಿಸಿದೆ ಎಂದು ತಿಳಿಸಿರುತ್ತಾರೆ. ಇದರನ್ವಯ, ಸಮಗ್ರ ಭದ್ರಾ ಮೇಲ್ದಂಡೆ ಯೋಜನೆಯ ವಿವರವಾದ ಯೋಜನಾ ವರದಿಯನ್ನು ದಿನಾಂಕ.24.01.2014 ರಂದು ಜರುಗಿದ ನಿಗಮದ 62ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದ್ದು ಚರ್ಚೆಯ ನಂತರ, ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ರೂ.12340.00 ಕೋಟಿಗಳ ಮೊತ್ತದ ಸಮಗ್ರ ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಮಂಡಳಿಯು ಅನುಮೋದಿಸಿ, ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲು ಶಿಫಾರಸ್ಸು ಮಾಡಿದೆ ಎಂದು ವರದಿ ಮಾಡಿರುತ್ತಾರೆ.

..2...

ಈ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರು ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ 2,25,515 ಹೆ. ಭೂಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು 19.04 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಚಿತ್ರದುರ್ಗ ಶಾಖಾ ಕಾಲುವೆ, ಜಗಳೂರು ಶಾಖಾ ಕಾಲುವೆ, ತರೀಕೆರೆ ಏತ ಹಾಗೂ ಗುರುತ್ವ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆಗಳನ್ನು ನಿರ್ಮಿಸಿ, ಇದರಡಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಮತ್ತು ಈ ಜಿಲ್ಲೆಗಳಲ್ಲಿನ 367 ಸಣ್ಣ ನೀರಾವರಿ ಕೆರೆಗಳನ್ನು 8.86 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ತುಂಬಿಸಲು ಮತ್ತು ವಾಣಿವಿಲಾಸ ಸಾಗರಕ್ಕೆ 2.00 ಟಿ.ಎಂ.ಸಿ. ನೀರು ತುಂಬಿಸುವ ಒಟ್ಟಾರೆ 29.90 ಟಿ.ಎಂ.ಸಿ. ನೀರಿನ ಬಳಕೆಯ ರೂ.12340.00 ಕೋಟಿಗಳ ಮೊತ್ತಕ್ಕೆ (2012-13ರ ದರಪಟ್ಟಿಯಂತೆ) ತಯಾರಿಸಲಾಗಿರುವ ಸಮಗ್ರ ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಯೋಜನಾ ವರದಿಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

<u>ಸರ್ಕಾರಿ ಆದೇಶ ಸಂ: ಜಸಂಇ 53 ವಿಬ್ಯಾಇ 2014, ಬೆಂಗಳೂರು, ದಿನಾಂಕ: 06.03.2015</u>

ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡು 2,25,515ಹೆ ಭೂಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಮತ್ತು 367 ಸಣ್ಣ ನೀರಾವರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು ಮತ್ತು ತುಮಕೂರು ಶಾಖಾ ಕಾಲುವೆ ಮುಖಾಂತರ 2 ಟಿಎಂಸಿ ನೀರನ್ನು ವಾಣಿವಿಲಾಸ ಸಾಗರಕ್ಕೆ ಪೂರೈಸುವ ಭದ್ರಾ ಮೇಲ್ದಂಡೆ ಯೋಜನೆಯ ರೂ.12,340.00 ಕೋಟಿ ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಮುಂದುವರೆದು, ಸದರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಪರಿಷ್ಕೃತ ಯೋಜನಾ ವರದಿಯಲ್ಲಿನ ಅವಶ್ಯವಿರುವ ತುರ್ತು ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಕ್ರಮವಹಿಸುವುದು ಎಂದು ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ:ಸಂಖ್ಯೆ: FD 596 FC-1/2014 ದಿನಾಂಕ 22.11.2014 ಹಾಗೂ ಅ.ಟಿ. ಸಂಖ್ಯೆ: FD/PS/1974/2015, ದಿನಾಂಕ 24.01.2015 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/3/2015

(ಕೆ.ಎಸ್. ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-4),
ಜಲ ಸಂಪನ್ಮೂಲ ಇಲಾಖೆ.

<u>ಇವರಿಗೆ</u>

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.

2) ಮಹಾಲೇಖಪಾಲರು (ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ), ವಿಧಾನ ಸೌಧ, ಬೆಂಗಳೂರು (ಸಚಿವ ಸಂಪುಟ ವಿಷಯ ಸಂಖ್ಯೆ:ಸಿ:04:2015, ದಿನಾಂಕ:08.01.2015ರ ಕುರಿತಂತೆ ಹಾಗೂ ದಿನಾಂಕ 21.01.2015 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿಯ ಸ್ಥಿರೀಕರಣದನ್ವಯ).
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ, ಬೆಂಗಳೂರು.
11) ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
12) ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನಸೌಧ, ಬೆಂಗಳೂರು.
13) ಜಲಸಂಪನ್ಮೂಲ ಇಲಾಖೆಯ ಎಲ್ಲಾ ಉಪ ಕಾರ್ಯದರ್ಶಿಗಳು/ ವಿಶೇಷ ಕರ್ತವ್ಯಾಧಿಕಾರಿಗಳು/ ಅಧೀನ ಕಾರ್ಯದರ್ಶಿಗಳು , ವಿಕಾಸ ಸೌಧ, ಬೆಂಗಳೂರು.
14) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ / ಅಂತರರಾಜ್ಯ ಜಲ ವಿವಾದ, ಆನಂದ್ ರಾವ್ ವೃತ್ತ, ಬೆಂಗಳೂರು–9.
15) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು.
16) ಮುಖ್ಯ ಇಂಜಿನಿಯರ್, ಕನೀನಿನಿ, ಭದ್ರಾ ಮೇಲ್ದಂಡೆ ಯೋಜನೆ, ಚಿತ್ರದುರ್ಗ.
17) ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ ಬೆಂಗಳೂರು, 10 ಪ್ರತಿಗಳು.
18) ನಿರ್ದೇಶಕರು, ಜಿಯೋಮೆಟ್ರಿಕ್ ಕೇಂದ್ರ, ಆನಂದರಾವ್ ವೃತ್ತ, ಬೆಂಗಳೂರು.
19) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿ.